ಆ) ಜುಲೈ 2003 ರಿಂದ ಪ್ರಾರಂಭಿಸಲಾಯಿತು.

ಇ) ಮದ್ಯದಂಗಡಿಗಳ ಸಂಖ್ಯೆ 3,334 ಬ್ಲಾಕ್ ಶಾಪ್‌ಗಳು ಇರಲಿಲ್ಲ.

ಈ) ಎಂ.ಎಸ್ ಐ ಎಲ್ ವತಿಯಿಂದ ಯಾವುದೇ ಸಿಎಲ್–2, ಸಿಎಲ್–9 ಮಳಿಗೆಗಳನ್ನು ನಡೆಸುತ್ತಿರುವುದಿಲ್ಲ. ಎಂಎಸ್ಐಎಲ್ ವತಿಯಿಂದ 374ಸಿ. ಎಲ್(11–ಸಿ) ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರಿ ಸ್ವಾಮ್ಯದ ಮಳಿಗೆಗಳನ್ನು ಸಿಎಲ್–11ಸಿ ಎಂದು ಗುರುತಿಸಲಾಗುತ್ತದೆ.

ಉ) ಸಾರಾಯಿ ವ್ಯಾಪಾರ ಇದ್ದಾಗ 2006–07ನೇ ಸಾಲಿನಲ್ಲಿ ಸಾರಾಯಿ ಬಾಬ್ತಿನಿಂದ ₹ 2,063.08 ಕೋಟಿ ರಾಜಸ್ವ ಸಂಗ್ರಹವಾಗಿತ್ತು 2012–13 ನೇ ಸಾಲಿನಲ್ಲಿ ₹ 11,069.73 ಕೋಟಿ ರಾಜಸ್ವ ಸಂಗ್ರಹವಾಗಿರುತ್ತದೆ.

ಊ) ಇಲ್ಲ.

ಋ) ಹೌದು.

ಎ) ಇಲ್ಲ.

ಕಳ್ಳಭಟ್ಟಿ ನಿಷೇಧ ಮತ್ತು ಪರ್ಯಾಯ ಪುನರ ವಸತಿ ಯೋಜನೆ

303(568); ಶ್ರೀ ಬೋಪಯ್ಯ ಕೆ ಜೆ. ವಿರಾಜಪೇಟೆ

ಅ) ರಾಜ್ಯದಲ್ಲಿ ಕಳ್ಳಭಟ್ಟಿಯನ್ನು ದಂಧೆಯನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆಯೇ; ಈಗಲೂ ಕಳ್ಳಭಟ್ಟಿ ಅಸ್ತಿತ್ವದಲ್ಲಿರುವ ಜಿಲ್ಲೆಗಳು ಯಾವುವು;

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳನ್ನು ಮುಚ್ಚಲಾಗಿದೆ; ಕಳ್ಳಭಟ್ಟಿ ತಯಾರಿಕೆ ಮಾಡುತ್ತಿದ್ದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ;

ಇ) ಕಳ್ಳಭಟ್ಟಿ ತಯಾರಿಕೆ ಮಾಡುತ್ತಿದ್ದವರಿಗೆ ಸರ್ಕಾರ ಪರ್ಯಾಯ ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಿದೆಯೇ, ಹಾಗಿದ್ದಲ್ಲಿ ಪರ್ಯಾಯ ಪುನರ್ವಸತಿ ಯೋಜನೆಗಳು ಯಾವುವು?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಅಬಕಾರಿ ಸಚಿವರು)

ಅ) ರಾಜ್ಯದಲ್ಲಿ ಕಳ್ಳಭಟ್ಟಿಯನ್ನು ದಂಧೆಯನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿರುವುದಿಲ್ಲ

ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ದಾವಣಗೆರೆ, ಧಾರವಾಡ, ಗದಗ, ಹಾವೇರಿ,ಕೋಲಾರ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ದಂಧೆ ಅಸ್ತಿತ್ವದಲ್ಲಿ ಇರುತ್ತದೆ

ಆ) 2008 ರಲ್ಲಿ 2048 ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳಿದ್ದು ಈವರೆಗೆ ಒಟ್ಟು 1948 ಕಳ್ಳಭಟ್ಟಿ ಕೇಂದ್ರಗಳನ್ನು ನಿರ್ಮೂಲನೆಗೊಳಿಸಲಾಗಿದೆ.

ರಾಜ್ಯದಾದ್ಯಂತ ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳ ಮೇಲೆ ಪ್ರತಿನಿತ್ಯ ವ್ಯವಸ್ಥಿತ ಅಬಕಾರಿ ದಾಳಿ ನಡೆಸಿ ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ. ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನ-ವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಸರ್ಕಾರಿ/ಅರಣ್ಯ ಪ್ರದೇಶಗಳಲ್ಲಿ ಕಳ್ಳಭಟ್ಟಿ ತಯಾರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸದರಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಅಕ್ರಮವೆಸಗದಂತೆ ಕ್ರಮ ಜರುಗಿಸಲಾಗಿದೆ. 2011-12 ನೇ ಸಾಲಿನಲ್ಲಿ 2071, 2012-13ನೇ ಸಾಲಿನಲ್ಲಿ 746 ಹಾಗೂ 2013-14 ನೇ ಸಾಲಿನಲ್ಲಿ (ಸೆಪ್ಟಂಬರ್ 2013 ರವರೆಗೆ) 458 ಪ್ರಕರಣಗಳನ್ನು ದಾಖಲಿಸಲಾಗಿದೆ

ಇ) ಕಳ್ಳಭಟ್ಟಿ ತಯಾರಿಕೆ ಮಾಡುತ್ತಿದ್ದವರಿಗೆ ಸರ್ಕಾರದಿಂದ ಪರ್ಯಾಯ ಪುನರ್ವಸತಿ ವ್ಯವಸ್ಥೆಯನ್ನು ರೂಪಿಸಲಾಗಿದೆ

ಕಳ್ಳಭಟ್ಟಿ ತಯಾರಿಕೆ ಹಾಗೂ ಮಾರಾಟ ಮಾಡುವ ವೃತ್ತಿಯಲ್ಲಿ ತೊಡಗಿದ್ದ ಆರೋಪಿಗಳ ಕುಟುಂಬದ ಸದಸ್ಯರನ್ನು ಗುರುತಿಸಿ ಅವರ

ಬದುಕಿನ ವಸ್ತುಸ್ಥಿತಿಯನ್ನು ಪರಿಶೀಲಿಸಿ, ಅವರ ಕ್ಷೇಮಾಭಿವೃದ್ಧಿಗಾಗಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ವೈಯಕ್ತಿಕ ಹಾಗೂ ಸಾಮೂಹಿಕವಾಗಿ ಪ್ರಾಯೋಜಿತ ನೆರವನ್ನು ಒದಗಿಸುವ ಮೂಲಕ ಪುನರ್ವಸತಿ ಕಲ್ಪಿಸುವ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 2013–14ನೇ ಸಾಲಿನ ಆಯವ್ಯಯದಲ್ಲಿ ಕಳ್ಳಭಟ್ಟಿ ಸಂತ್ರಸ್ತರ ಕುಟುಂಬಗಳ ಪುನರ್ವಸತಿಗೆ ಅನುದಾನವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಪ್ರವಾಸಿ ತಾಣಗಳ ಅಭಿವೃದ್ಧಿ

363(389); ಶ್ರೀ ನರೇಂದ್ರಸ್ವಾಮಿ ಪಿ.ಎಂ. (ಮಳವಳ್ಳಿ)

ಅ) ಮಳವಳ್ಳಿ ತಾಲ್ಲೂಕಿನಲ್ಲಿ ಯಾವ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

ಆ) ಸದರಿ ತಾಣಗಳನ್ನು ನಿರ್ಲಕ್ಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು;

ಇ) ಪ್ರಸಕ್ತ ಆಯವ್ಯಯದಲ್ಲಿ ಸದರಿ ತಾಣಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಹಮ್ಮಿಕೊಳ್ಳಲಾಗಿರುವ ಯೋಜನೆಗಳೇನು, ಅನುದಾನದ ಮೊತ್ತವೆಷ್ಟು,

ಈ) ಈ ಪ್ರವಾಸಿ ಸ್ಥಳಗಳಿಗೆ ಹೊರ ರಾಜ್ಯಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸುವ ಪ್ರವಾಸಿಗರಿಗೆ ಅನುಕೂಲವಾಗುವಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಶೇಷ ಪ್ಯಾಕೇಜ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಮಳವಳ್ಳಿ ತಾಲೂಕಿನಲ್ಲಿ ಶಿವನಸಮುದ್ರ ಹಾಗೂ ಭೀಮೇಶ್ವರಿ ತಾಣಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ.